ಕಾಂಗ್ರೆಸ್ ಕಚೇರಿಯಲ್ಲಿ ಅಂಬೇಡ್ಕರ್ ಮಹಾಪರಿನಿರ್ವಾಣ ದಿನ

ಜಿಲ್ಲಾ ... ಸಮಿತಿ, ತುಮಕೂರು.
DISTRIC... CONGRESS COMITTEE

ತುಮಕೂರು

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಬುಧವಾರ ಡಾ. ಬಿ.ಆರ್. ಅಂಬೇಡ್ಕರ್‌ರವರ 62ನೇ ಮಹಾ ಪರಿನಿರ್ವಾಣ ದಿನ ಆಚರಣೆ ಮಾಡಲಾಯಿತು.

ಜಿಲ್ಲಾಧ್ಯಕ್ಷರಾದ ಆರ್. ರಾಮಕೃಷ್ಣರವರು ಮಾತನಾಡಿ ಡಾ. ಬಿ.ಆರ್. ಅಂಬೇಡ್ಕರ್ ಏಪ್ರಿಲ್ 14, 1891 ರಲ್ಲಿಮಧ್ಯಪ್ರದೇಶದ ಮಾಹೋ ಎಂಬ ಮಿಲಿಟರಿ ಕ್ಯಾಂಪ್‌ನಲ್ಲಿ ಹುಟ್ಟಿದ್ದು, ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ ಖೇಡಾ ತಾಲ್ಲೂಕಿನ ಅಂಬೆವಾಡಿ ಗ್ರಾಮದರಾದ ಇವರು ಸಾಮಾಜಿಕ ಸಮಾನತೆ, ಅಸ್ಪೃಶ್ಯತಾ ನಿವಾರಣೆಗಾಗಿ ಹೋರಾಡಿದ ಮಹಾನ್ ಭಾರತೀಯ ನಾಯಕರಲ್ಲೊಬ್ಬರು. ಭಾರತದ ಸಂವಿಧಾನವನ್ನು ರಚಿಸಿದ ಇವರನ್ನು ಸಂವಿಧಾನ ಶಿಲ್ಪಿ ಎಂದು ಕರೆಯುತ್ತಾರೆ. ಇವರು ಹೆಚ್ಚಿನ ವಿದ್ಯಾಭ್ಯಾಸ ಮಾಡಿದ್ದರು. ಇವರು ಭಾರತ ದೇಶಕ್ಕೆ ಕೊಟ್ಟಂತಹ ಕೊಡುಗೆ ಅಪಾರವಾದದ್ದು, ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಹೋರಾಟ - ಶಿಕ್ಷಣ - ಸಂಘಟನೆ ಎಂದು ಬಹು ಪ್ರಮುಖವಾದದ್ದು ಎಂದರು.

ಮಾಜಿ ಟೂಡಾ ಅಧ್ಯಕ್ಷರಾದ ರೆಡ್ಡಿ ಚಿನ್ನಯಲ್ಲಪ್ಪನವರು ಮಾತನಾಡಿ ಡಾ. ಅಂಬೇಡ್ಕರ್‌ರವರಿಗೆ ಪ್ರಾಥಮಿಕ ಶಿಕ್ಷಣವನ್ನು ಹಲವಾರು ನೋವು ಮತ್ತು ಅವಮಾನಗಳಿಂದ ಮುಗಿಸಿ ಮಾಧ್ಯಮಿಕ ಶಿಕ್ಷಣಕ್ಕಾಗಿ ಬಾಂಬೆಯ ಸರ್ಕಾರಿ ಪ್ರೌಢಶಾಲೆಯಲ್ಲಿ ಮುಗಿಸಿದರು. ಅಂಬೇಡ್ಕರ್‌ರವರಿಗೆ ಚುಚ್ಚು ಮಾತುಗಳಿಂದ ಶೋಷಣೆಗೆ ಒಳಗಾದ ಮಹಾನ್ ನಾಯಕರು. ಅವಮಾನಗಳಿಂದ ಶೋಷಣೆಗೆ ಒಳಗಾದ ಇವರು ಭಾರತದ ಸಂವಿಧಾನ ಬರೆದು ಇಡೀ ರಾಷ್ಟ್ರಕ್ಕೆ ಮಾದರಿಯಾಗಿದ್ದಾರೆಂದರು.

ಹಿರಿಯ ಮುಖಂಡರಾದ ರೇವಣ ಸಿದ್ದಪ್ಪನವರು ಮಾತನಾಡಿ ಡಾ. ಅಂಬೇಡ್ಕರ್‌ರವರಂತಹ ಮಾನವಾತವಾದಿ ಈ ಭಾರತ ದೇಶದಲ್ಲಿ ಹುಟ್ಟದೇ ಹೋಗಿದ್ದರೆ ಅವರನ್ನು ನೆನಪಿಸಿಕೊಳ್ಳಲು ಸಾಧ್ಯವೇ ? ಅಂಬೇಡ್ಕರ್‌ರವರು ಈ ದೇಶದಲ್ಲಿ ಮೀಸಲಾತಿ ತರದೆ ಹೋಗಿದ್ದರೆ.. ದಲಿತರಿಗೆ ದೊಡ್ಡ ರೀತಿಯಲ್ಲಿ ಅನ್ಯಾಯ ಅಗುತ್ತಿತ್ತು. ದಲಿತರನ್ನು ಮನುಷ್ಯರಂತೆ ನೋಡಿಕೊಳ್ಳಿ ಎಂದು ಹೇಳಿದ್ದರು.

ಎಸ್.ಟಿ. ಘಟಕದ ಜಿಲ್ಲಾಧ್ಯಕ್ಷರಾದ ಟಿ.ಬಿ. ಮಲ್ಲೇಶ್ ಮಾತನಾಡಿ ದಲಿತ ವರ್ಗದವರನ್ನು ಜಾಗೃತರನ್ನಾಗಿ ಮಾಡಲು ಶಿಕ್ಷಣ ಮತ್ತು ಸಂಸ್ಕೃತಿ ಬಗ್ಗೆ ತಿಳಿಸಲು ಆರ್ಥಿಕ ಸೌಕರ್ಯ ನೀಡಲು ಮುಂದಾದ ವ್ಯಕ್ತಿ ಬಾಬಾ ಸಾಹೇಬ್ ಅಂಬೇಡ್ಕರ್ ರವರು. ಆದ್ದರಿಂದ ಮುಂದಿನ ದಿನಗಳಲ್ಲಿ ಡಾ. ಜಿ. ಪರಮೇಶ್ವರ್‌ರವರನ್ನು ಮುಖ್ಯಮಂತ್ರಿ ಮಾಡಲು ಜಿಲ್ಲೆಯ ಎಲ್ಲಾ ನಾಯಕರುಗಳು ಒಗ್ಗಟ್ಟು ಪ್ರದರ್ಶಿಸಬೇಕೆಂದರು.

ಮುಖಂಡರಾದ ನರಸೀಯಪ್ಪ ಮಾತನಾಡಿ ಡಾ. ಅಂಬೇಡ್ಕರ್‌ರವರಂತಹ 62ನೇ ಪರಿನಿರ್ವಾಣ ದಿನವನ್ನು ಮೌನ ರೀತಿಯಲ್ಲಿ ಆಚರಣೆ ಮಾಡಬೇಕು. ಇದು ಸಂಭ್ರಮಿಸುವ ಸಂದರ್ಭವಲ್ಲ, ಏಕೆಂದರೆ ಇಂದು ಅವರು ಮರಣ ಹೊಂದಿದ ದಿನ.. ಇತ್ತೀಚಿಗೆ ಬಿ.ಜೆ.ಪಿ.ಯವರು ಅವರ ಪೋಟೋಗಳಿಗೆ ಪೂಜೆ ಮಾಡಿ ಮರೆತು ಹೋಗುತ್ತಾರೆ. ಆದರೆ ಎಲ್ಲಾ ಪಕ್ಷಗಳಲ್ಲಿ ದಲಿತರು, ಮುಸ್ಲಿಂರು ಇದ್ದಾರೆ. ಆದರೆ ಕಾಂಗ್ರೆಸ್ ಪಕ್ಷ ಮಾತ್ರ ನೊಂದಂತಹ ಸಮುದಾಯಗಳಿಗೆ ನ್ಯಾಯ ಕೊಡುತ್ತದೆ. ರಾಜ್ಯದ ಎಲ್ಲಾ ಜಿಲ್ಲಾ ದಲಿತ ಮುಖಂಡರು 1974ರಲ್ಲಿ ದಲಿತ ಸಂಘ ಸ್ಥಾಪನೆ ಮಾಡಿ ಅಂಬೇಡ್ಕರ್‌ರವರ ವಿಚಾರಗಳನ್ನು ಪ್ರಚಾರ ಮಾಡಲು ಸಮಿತಿ ರಚಿಸಿದ್ದರು ಎಂದರು.

ಎಸ್.ಸಿ. ಘಟಕದ ಅಧ್ಯಕ್ಷರಾದ ಲಿಂಗರಾಜು ಮಾತನಾಡಿ ಡಾ. ಅಂಬೇಡ್ಕರ್‌ರವರಂತಹ ಮಹಾನ್ ನಾಯಕರನ್ನು ಕಳೆದುಕೊಂಡ ನಾವೆಲ್ಲರೂ ಇಂದು ನೋವಲ್ಲಿದ್ದೇವೆ. ಅವರನ್ನು ಏಕೆ ಸ್ಮರಣೆ ಮಾಡಿಕೊಳ್ಳಬೇಕೆಂದರೆ ಅವರ ಕೊಡುಗೆ ಸಂವಿಧಾನ ಬರೆದು ಇಡೀ ವಿಶ್ವಕ್ಕೆ ಮಾದರಿಯಾಗಿದ್ದಾರೆ. ಸಂವಿಧಾನದಲ್ಲಿ ಜನರಿಗೆ ಏನು ಮಾಡಬೇಕು? ರಾಜಕೀಯದಲ್ಲಿ ಪ್ರಾತಿನಿದ್ಯ ಎಲ್ಲವನ್ನೂ ಸಹ ಸಂಪೂರ್ಣವಾಗಿ ಬರೆದಿದ್ದಾರೆ. ಅಂಬೇಡ್ಕರ್‌ರವರು ಜ್ಞಾನದಲ್ಲಿ ಹಾಗೂ ಬುದ್ದಿವಂತಿಕೆಯಲ್ಲಿ ದೊಡ್ಡ ವ್ಯಕ್ತಿ. ಆದ್ದರಿಂದ ಯುವಕರು ಒಳ್ಳೆಯ ದಾರಿಯಲ್ಲಿ ನಡೆಯಬೇಕು. ಅವರ ಜ್ಞಾನವನ್ನು ಎಲ್ಲರೂ ಹಂಚಿಕೊಂಡು ಹೋಗಬೇಕೆಂದರು.

ಕಾರ್ಯಕ್ರಮದಲ್ಲಿ, ಬಾಲಾಜಿ ಕುಮಾರ್, ವಕ್ಫ್ ಬೋರ್ಡ್ ಅಧ್ಯಕ್ಷರಾದ ಎಕ್ಬಾಲ್ ಅಹಮ್ಮದ್, ನರಸಿಯಪ್ಪ, ಲಿಂಗರಾಜು, ವಕೀಲರಾದ ಹರಿಕುಮಾರ್, ಪುಟ್ಟಬೋರಯ್ಯ, ಪುರುಷೋತ್ತಮರಾವ್, ಕೆಂಪಣ್ಣ, ಜಯಮೂರ್ತಿ, ಶಿವಾಜಿ, ವಿರೂಪಾಕ್ಷ, ರಾಜೇಶ್ ದೊಡ್ಮನೆ, ದಿವಾಕರ್ ನಾಯ್ಡು ಇನ್ನು ಮುಂತಾದವರಿದ್ದರು.

ಗ್ರಾಮೀಣ ಪ್ರದೇಶದ ಮನೆಗಳ ಸಕ್ರಮ

>>> 1ನೇ ಪುಟದಿಂದ...

ವಿವರವನ್ನು ಹೇಳಿ ಅಸಮಾಧಾನ ವ್ಯಕ್ತಪಡಿಸಿದರು.

ಈ ವಿಷಯದಲ್ಲಿ ಜನಪ್ರತಿನಿಧಿಗಳೂ ಹೆಚ್ಚಿನ ಕಾಳಜಿ ತೋರಿಸಬೇಕು.ಆದರೆ ಈಗ ಗೆಲ್ಲುವ ಅಭ್ಯರ್ಥಿಗಳನ್ನು ಹುಡುಕುವ ಯುಗ ಆರಂಭವಾಗಿರುವುದರಿಂದ ಸಾಮಾಜಿಕ ಬದ್ದತೆಯುಳ್ಳ ಜನಪ್ರತಿನಿಧಿಗಳು ಕಡಿಮೆಯಾಗುತ್ತಿದ್ದಾರೆ ಎಂದು ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಹೇಳಿದರು.

ರಾಜ್ಯ ಕಾಂಗ್ರೆಸ್ ಉಸ್ತುವಾರಿ ವಹಿಸಿಕೊಂಡಿರುವ ಕೆ.ಸಿ.ವೇಣುಗೋಪಾಲ್ ಅವರ ವಿರುದ್ಧ ಆರೋಪವಿದ್ದರೆ ಕೇರಳಕ್ಕೆ ಹೋಗಿ ಬಿಜೆಪಿಯವರು ಮಾತನಾಡಲಿ.ಅದನ್ನು ಬಿಟ್ಟು ಇಲ್ಲಿ ಮಾತನಾಡುವುದು ಸರಿಯಲ್ಲ.ಒಂದು ಪಕ್ಷದ ಆಂತರಿಕ ವ್ಯವಹಾರದ ಬಗ್ಗೆ ಮಾತನಾಡಲು ಇವರ್‍ಯಾರು ಎಂದು ಪ್ರಶ್ನಿಸಿದರು.

ಇವತ್ತು ರಾಜಕೀಯ ಪಕ್ಷಗಳು ತಮ್ಮ ಕಾರ್ಯಕ್ರಮಗಳ ಮೂಲಕ ಜನರ ಬಳಿ ಹೋಗಬೇಕೇ ಹೊರತು ಮತ್ತೊಬ್ಬರನ್ನು ಅವಾಚ್ಯವಾಗಿ ಬೈಯ್ಯುವ ಮೂಲಕ ಅಲ್ಲ.ಎಂದು ಅವರು ಇದೇ ಸಂದರ್ಭದಲ್ಲಿ ಅಭಿಪ್ರಾಯ ಪಟ್ಟರು.

ಕಾಂಗ್ರೆಸ್ ಪಕ್ಷದಲ್ಲಿ ಮುಖ್ಯಮಂತ್ರಿಗಳು ಪ್ರತ್ಯೇಕವಾಗಿ ರಾಜ್ಯಪ್ರವಾಸ ಮಾಡುತ್ತಾರೆ.ಕೆಪಿಸಿಸಿ ಅಧ್ಯಕ್ಷರು ಅದಕ್ಕೆ ವಿರುದ್ಧವಾಗಿ ರಾಜ್ಯಪ್ರವಾಸ ಮಾಡುತ್ತಾರೆ ಎಂಬ ಆರೋಪಗಳ ಕುರಿತು ಪ್ರತಿಕ್ರಿಯಿಸಿದ ಅವರು, ಸಹಜವಾಗಿ ಒಂದು ಪಕ್ಷ ಆಡಳಿತದಲ್ಲಿದ್ದಾಗ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಚುನಾವಣೆಯನ್ನು ಎದುರಿಸಲಾಗುತ್ತದೆ ಎಂದು ಮಾರ್ಮಿಕವಾಗಿ ನುಡಿದರು.

ಈ ವಿಷಯದಲ್ಲಿ ಯಾರೂ ಅಪ್ರಬುದ್ಧ ನಡವಳಿಕೆ ಪ್ರದರ್ಶಿಸಬಾರದು ಎಂದ ಅವರು,ತಮಗೆ ತಿಳಿದಂತೆ ಮುಖ್ಯಮಂತ್ರಿಗಳು ಹಾಗೂ ಅಧ್ಯಕ್ಷರ ನಡುವೆ ಯಾವ ಭಿನ್ನಾಭಿಪ್ರಾಯವೂ ಇಲ್ಲ.ಎಂದು ಹೇಳಿದರು.

ಮುಂದಿನ ಚುನಾವಣೆಯಲ್ಲಿ ನೀವು ಸ್ಪರ್ಧಿಸುತ್ತೀರಾ?ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು,ನಾನು ಸ್ಪರ್ಧಿಸುವುದು,ಬಿಡುವುದು ಪಕ್ಷಕ್ಕೆ ಬಿಟ್ಟಿದ್ದು.ಪಕ್ಷ ಹೇಳಿದಂತೆ ಕೇಳುತ್ತೇನೆ.ಕೇಳಬೇಕು ಎಂದು ನುಡಿದರು.

ಚುನಾವಣೆ : ರಾಜ್ಯಕ್ಕೂ ಪರಿಣಾಮ

ಬೆಂಗಳೂರು

ಗುಜರಾತ್ ವಿಧಾನಸಭಾ ಚುನಾವಣೆ ಫಲಿತಾಂಶ ಬಿಜೆಪಿ ಮತ್ತು ಕಾಂಗ್ರೆಸ್‌ನಲ್ಲಿ ಸಾಕಷ್ಟು ಬದಲಾವಣೆ ಆಗಲಿದ್ದು, ಎರಡೂ ಪಕ್ಷಗಳಿಂದ ನಮ್ಮ ಪಕ್ಷಕ್ಕೆ ವಲಸೆ ಹೆಚ್ಚಾಗಲಿದೆ ಎಂದು ಜೆಡಿಎಸ್ ರಾಜ್ಯಾಧ್ಯಕ್ಷ ಎಚ್.ಡಿ. ಕುಮಾರ ಸ್ವಾಮಿ ಹೇಳಿದ್ದಾರೆ.

ನಗರದ ಜೆ.ಡಿ.ಎಸ್. ಕಚೇರಿ ಜೆ.ಪಿ. ಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗುಜರಾತ್ ಫಲಿತಾಂಶದ ನಂತರ ರಾಷ್ಟ್ರೀಯ ಪಕ್ಷಗಳಿಂದ ಹಲವರು ಜೆಡಿಎಸ್ ಸೇರಲಿದ್ದಾರೆ. ಹೀಗಾಗಿ ಫಲಿತಾಂಶಕ್ಕಾಗಿ ಅವರೆಲ್ಲಾ ಜಾತಕ ಪಕ್ಷಿಯಂತೆ ಕಾಯುತ್ತಿದ್ದಾರೆ ಎಂದರು.

ಹತ್ತು ವರ್ಷಗಳಲ್ಲಿ ಎರಡು ಸಾರ್ವತ್ರಿಕ ಚುನಾವಣೆ ಎದುರಿಸಿದ್ದು, ಈ ಬಾರಿಯ ಚುನಾವಣೆಯಲ್ಲಿ ಹಲವು ನಿರ್ದಿಷ್ಟ ಕ್ಷೇತ್ರಗಳತ್ತ ಚಿತ್ತ ಹರಿಸಿದೆ. ಆದರೆ ಎಲ್ಲಾ 224 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಹಾಕಲಿದ್ದು, ಒಟ್ಟಾರೆ 113 ಸ್ಥಾನ ಗೆಲ್ಲುವ ಗುರಿ ಇದೆ. ಇಲ್ಲದಿದ್ದರೆ ರಾಜ್ಯಪಾಲರಿಂದ ಸರ್ಕಾರ ರಚನೆಗೆ ಆಹ್ವಾನ ಬರುವುದಿಲ್ಲ ಎಂದರು.

ಕಡಿಮೆ ಸ್ಥಾನಗಳನ್ನು ಗೆದ್ದರೆ ಬೇರೆ ಪಕ್ಷದ ಬಾಗಿಲಿಗೆ ಹೋಗುವ ಸ್ಥಿತಿ ಬರುತ್ತದೆ. ಉತ್ತರ ಕರ್ನಾಟಕದಲ್ಲಿ ಪಕ್ಷ ದುರ್ಬಲವಾಗಿರುವುದು ನಿಜ. ಆದರೆ ಹಳೆ ಮೈಸೂರು ಭಾಗದಲ್ಲಿ ಹೆಚ್ಚು ಸ್ಥಾನ ಗೆಲ್ಲುವ ವಿಶ್ವಾಸವಿದೆ. ಹೈದರಾಬಾದ್ ಕರ್ನಾಟಕ ಭಾಗದಲ್ಲೂ ಪಕ್ಷಕ್ಕೆ ಉತ್ತಮ ಅವಕಾಶವಿದೆ ಎಂದು ಹೇಳಿದರು.

ತಾವು ಮುಖ್ಯಮಂತ್ರಿಯಾಗಿದ್ದಾಗ ಅದಾನಿ ಕಂಪನಿಯನ್ನು ಕಪ್ಪು ಪಟ್ಟಿಗೆ ಸೇರಿಸಲಾಗಿತ್ತು. ಈಗ ಅಂತಹ ಕಂಪನಿಗೇ ಮುಖ್ಯಮಂತ್ರಿ ಸಿದ್ದರಾಮಯ್ಯ ಮಣೆ ಹಾಕಿದ್ದಾರೆ. ಉಡುಪಿ ಬಳಿ ವಿದ್ಯುತ್ ಉತ್ಪಾದನಾ ಘಟಕ ಸ್ಥಾಪನೆಗೆ ಹಸಿರು ನಿಶಾನೆ ತೋರಲಾಗಿದೆ. ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ಅದಾನಿ ಪಾತ್ರವನ್ನು ಮುಚ್ಚಿಹಾಕುವ ತಂತ್ರ ಇದಾಗಿದೆ ಎಂದು ಕುಮಾರ ಸ್ವಾಮಿ ಆರೋಪಿಸಿದರು.

ರವಿ ಬೆಳಗೆರೆ, ಅನಿಲ್ ರಾಜ್‌ಗೆ ಶಿಕ್ಷೆ : ಹೈಕೋರ್ಟ್ ತಡೆ

ಬೆಂಗಳೂರು

'ಹಾಯ್ ಬೆಂಗಳೂರು' ಪತ್ರಿಕೆ ಸಂಪಾದಕ ರವಿ ಬೆಳಗೆರೆ ಮತ್ತು ಯಲಹಂಕ ವಾಯ್ಸ್ ಸಂಪಾದಕ ಅನಿಲ್ ರಾಜ್ ಅವರಿಗೆ ವಿಧಾನಸಭೆ ಹಕ್ಕು ಬಾಧ್ಯತೆ ಸಮಿತಿ ನೀಡಿರುವ ಒಂದು ವರ್ಷ ಜೈಲು ಶಿಕ್ಷೆಗೆ ಬುಧವಾರ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಹಕ್ಕುಬಾಧ್ಯತಾ ಸಮಿತಿಯ ಆದೇಶ ರದ್ದುಗೊಳಿಸುವಂತೆ ಕೋರಿ ರವಿ ಬೆಳಗೆರೆ ಹಾಗೂ ಅನಿಲ್ ರಾಜ್ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎ.ಎಸ್ ಬೋಪಣ್ಣ ಅವರು, ಶಿಕ್ಷೆಗೆ ತಡೆ ನೀಡಿ, ಅಂತಿಮ ಆದೇಶ ನೀಡುವವರೆಗೂ ಇಬ್ಬರು ಪತ್ರಕರ್ತರನ್ನು ಬಂಧಿಸದಂತೆ ಪೊಲೀಸರಿಗೆ ನಿರ್ದೇಶನ ನೀಡಿದ್ದಾರೆ.

ತಮ್ಮ ವಿರುದ್ಧದ ಆರೋಪಗಳು ಶಾಸಕರ ಹಕ್ಕು ಚ್ಯುತಿ ವ್ಯಾಪ್ತಿಗೆ ಒಳಪಡುವುದಿಲ್ಲ. ಹೈಕೋರ್ಟ್ ನಿರ್ದೇಶನದಂತೆ ಮತ್ತೊಮ್ಮೆ ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಿದ್ದರೂ ಸಮಿತಿ ವಾದ ಮಂಡನೆಗೆ ಅವಕಾಶ ನೀಡಿಲ್ಲ, ಇದೀಗ ಬಂಧಿಸುವಂತೆ ಪೊಲೀಸರಿಗೆ ನಿರ್ದೇಶಿಸಲಾಗಿದೆ. ಹೀಗಾಗಿ ಹಕ್ಕುಬಾಧ್ಯತಾ ಸಮಿತಿಯ ಆದೇಶ ರದ್ದುಗೊಳಿಸುವಂತೆ ಪತ್ರಕರ್ತರು ಕೋರ್ಟ್ ಗೆ ಮನವಿ ಮಾಡಿದ್ದರು.

ರವಿ ಬೆಳಗರೆ ಮತ್ತು ಯಲಹಂಕ ವಾಯ್ಸ್ ಪತ್ರಿಕೆಯ ಸಂಪಾದಕ ಅನಿಲ್ ರಾಜ್ ಅವರಿಗೆ ಹಕ್ಕು ಬಾಧ್ಯತಾ ಸಮಿತಿ ಒಂದು ವರ್ಷ ಜೈಲು ಶಿಕ್ಷೆ ಹಾಗೂ 10,000 ರುಪಾಯಿ ದಂಡ ವಿಧಿಸಿತ್ತು. ಇದನ್ನು ಮರು ಪರಿಶೀಲಿಸುವಂತೆ ಪತ್ರಕರ್ತರಿಬ್ಬರೂ ವಿಧಾನಸಭೆ ಅಧ್ಯಕ್ಷ ಕೆ.ಬಿ. ಕೋಳಿವಾಡ ಅವರಿಗೆ ಮನವಿ ಸಲ್ಲಿಸಿದ್ದರು. ಆದರೆ ಮನವಿಯನ್ನು ಕೋಳಿವಾಡ್ ಅವರು ತಿರಸ್ಕರಿಸಿದ್ದರು.

ಬಡ್ಡಿ ದರ, ಜಿಡಿಪಿ ಅಂದಾಜು ಉಳಿಸಿಕೊಂಡ ಆರ್‌ಬಿಐ

ಹೊಸದಿಲ್ಲಿ

ಬಡ್ಡಿ ದರ ಕಡಿತಕ್ಕೆ ಪೂರಕವಾದ ಹಣದುಬ್ಬರ ಸನ್ನಿವೇಶ ಇದ್ದ ಹೊರತಾಗಿಯೂ ಭಾರತೀಯ ರಿಸರ್ವ್ ಬ್ಯಾಂಕ್ ತನ್ನ ಬಡ್ಡಿದರಗಳನ್ನು ಯಥಾವತ್ ಉಳಿಸಿಕೊಂಡಿದೆ.

ನಗದು ಹೊಂದಾಣಿಕೆ ಸೌಕರ್ಯ (ಎಲ್ಎಎಫ್) ಅಡಿ ಆರ್‌ಬಿಐ ತನ್ನ ಪಾಲಿಸಿ ರಿಪೋ ರೇಟನ್ನು ಶೇ.6.0 ರಲ್ಲೇ ಯಥಾವಾತ್ ಉಳಿಸಿಕೊಂಡಿದೆ. ಪರಿಣಾಮವಾಗಿ ಎಲ್ಎಎಫ್ ರಿವರ್ಸ್ ರಿಪೋ ರೇಟನ್ನು ಕೂಡ ಆರ್‌ಬಿಐ ಶೇ.5.75ರಲ್ಲೇ ಉಳಿಸಿಕೊಂಡಿದೆ. ಇದೇ ರೀತಿ ಮಾರ್ಜಿನಲ್ ಸ್ಟ್ಯಾಂಡಿಂಗ್ ಫೆಸಿಲಿಟಿ (ಎಂಎಸ್ಎಫ್) ರೇಟ್ ಮತ್ತು ಬ್ಯಾಂಕ್ ರೇಟ್ ಕೂಡ ಶೇ.6.25ರಲ್ಲೇ ಉಳಿದುಕೊಂಡಿದೆ.

ಇದೇ ವೇಳೆ ಆರ್‌ಬಿಐ ಹಾಲಿ ಹಣಕಾಸು ವರ್ಷದ ಮೂರನೇ ಮತ್ತು ನಾಲ್ಕನೇ ತ್ರೈಮಾಸಿಕದಲ್ಲಿ ಹಣದುಬ್ಬರವನ್ನು ಶೇ.4.3ರಿಂದ ಶೇ.4.7ರ ಪ್ರಮಾಣದಲ್ಲಿ ಅಂದಾಜಿಸಿದೆ. ಹಾಗೆಯೇ ಆರ್ಥಿಕ ಪ್ರಗತಿಯ ಅಂದಾಜನ್ನು ಶೇ.6.7ರಲ್ಲೇ ಉಳಿಸಿಕೊಂಡಿದೆ.

ಹಣದುಬ್ಬರ ಇದೇ ರೀತಿ ಮುಂದೆಯೂ ಕೆಳಮಟ್ಟದಲ್ಲಿ ಉಳಿಯಲಾರದೆಂಬ ಕಾರಣಕ್ಕೆ ನಾವು ಬಡ್ಡಿದರ ಕಡಿತ ಮಾಡಿಲ್ಲ.ಎಂದು ಆರ್‌ಬಿಐ ಗವರ್ನರ್ ಊರ್ಜಿತ್ ಪಟೇಲ್ ಹೇಳಿದರು.

ಫಸ್ಟ್ ಯಾರು? ಸೆಕೆಂಡ್ ಯಾರು? ಮೋದಿ-ರಾಹುಲ್ ಸೆಣೆಸಾಟ

ಶೇಷಣ್ಣ ಮತ್ತು ಅರುಣ ಅಡಿಗ

ಆನಂದದಿಂದ ಪ್ರತ್ಯಕ್ಷ ವರದಿ

ಯಾವುದೇ ರಾಜ್ಯದಲ್ಲಿ ಸಾರ್ವತ್ರಿಕ ಚುನಾವಣೆ ನಡೆದರೂ ಆಯಾ ರಾಜ್ಯದಲ್ಲಿರುವ ಮತದಾರರಿಗಿಂತ ಫಲಿತಾಂಶದ ಬಗೆಗೆ ನೆರೆ ಹೊರೆ ರಾಜ್ಯಗಳ ಜನಕ್ಕೆ ಕುತೂಹಲ - ಚಿಂತೆ ಹೆಚ್ಚುತ್ತದಂತೆ. ಇದೀಗ ನಡೆದಿರುವ ಗುಜರಾತು ವಿಧಾನಸಭೆ ಇದಕ್ಕೊಂದು ಜ್ವಲಂತ ನಿದರ್ಶನ.

ಡಿಸೆಂಬರ್ 9 ಮತ್ತು 14ರಂದು ನಡೆಯಲಿರುವ ಮತದಾನದಲ್ಲಿ ಗುಜರಾತಿನ ಮಣ್ಣಿನ ಮಗನಾದ ಪ್ರಧಾನಿ ನರೇಂದ್ರಮೋದಿ ಗೆಲ್ಲುತ್ತಾರೆಯೇ ಇಲ್ಲವೇ, ಕಾಂಗ್ರೆಸ್ಸಿನ ಭಾವಿ ಅಧ್ಯಕ್ಷ ರಾಹುಲಗಾಂಧಿ ಮೋದಿಯನ್ನು ಸೋಲಿಸುತ್ತಾರೆಯೇ - ಇದು ಪ್ರಸ್ತುತ ಇಡೀ ದೇಶ ಚರ್ಚಿಸುತ್ತಿರುವ ವಿಷಯವಾಗಿದೆ.

ಗುಜರಾತು ಚುನಾವಣೆಯ ಬಗೆಗೆ ಹಿಂದೆಂದೂ ಕಾಣದಷ್ಟು ಜನಾಸಕ್ತಿ ಮತ್ತು ಆಕರ್ಷಣೆ ಹೆಚ್ಚಳಕ್ಕೆ ಕಾರಣವೆಂದರೆ, ವ್ಯಾಪಕವಾಗಿ ನಡೆಯುತ್ತಿರುವ ಸಮೀಕ್ಷೆಗಳು ಮತ್ತು ಮಾಧ್ಯಮಗಳ ಅಹರ್ನಿಶಿ ಜಾಗರಣೆ. ಪ್ರಾದೇಶಿಕ ಮತ್ತು ಹಿಂದಿ ಭಾಷೆಗೆ ಸೀಮಿತವಾದ ಸಣ್ಣ ಪುಟ್ಟ ಸಮೀಕ್ಷೆಗಳನ್ನು ಬಿಟ್ಟರೆ ಜನಮನ್ನಣೆ ಮತ್ತು ವೈಜ್ಞಾನಿಕ ವಿಶ್ಲೇಷಣೆಗೆ ಹೆಸರಾದ ಏಳೆಂಟು ಸಮೀಕ್ಷೆಗಳು ದೇಶದ ಗಮನವನ್ನು ಸೆಳೆದಿವೆ.

ಚುನಾವಣಾ ಸರ್ವೆ (ಸಮೀಕ್ಷೆ) ಪೈಕಿ ಸೋಮವಾರದಂದು ಪ್ರಕಟವಾದ ಎಬಿಪಿ - ಸಿಎಸ್‌ಡಿಎಸ್ ಜನಾಭಿಪ್ರಾಯವೇ ಇತ್ತೀಚಿನ ಬಿಸಿಬಿಸಿ ಲೇಟೆಸ್ಟ್ ಅಂದಾಜು ಎನ್ನಬಹುದು. ಈ ಸಂಸ್ಥೆಯ ಪ್ರಕಾರ ಕಾಂಗ್ರೆಸ್ ನಾಯಕ ರಾಹುಲಗಾಂಧಿಯವರ ಜನಪ್ರಿಯತೆಯ ರೇಟಿಂಗ್ ನರೇಂದ್ರ ಭಯ್ಯಾಗಿಂತಲೂ ಒಂದು ಕೆ.ಜಿ. ತೂಕ ಹೆಚ್ಚಿದೆ. ಇನ್ನು ಎರಡು ದಿನ ಮೊದಲನೆ ಹಂತಕ್ಕೆ ಸಮಯವಿದ್ದು, ಭಾರತೀಯ ಜನತಾ ಪಕ್ಷದ ಜನಾಕರ್ಷಣೆ ಕ್ರಮೇಣ ಕಡಿಮೆ ಆಗುತ್ತಿದೆ - ಇದು ಲೇಟೆಸ್ಟ್ ಸರ್ವೆಯ ಸಾರಾಂಶ.

ಪ್ರತ್ಯಕ್ಷ ನಡೆಸಲಾಗುವ ಸರ್ವೆಗಳ ಇತ್ತೀಚಿನ ಜನಾಭಿಪ್ರಾಯವನ್ನು ಸುಲಭವಾಗಿ ತಳ್ಳಿ ಹಾಕುವಂತಿಲ್ಲ.

ಯುವ ಲೇಖಕ ಅರುಣ ಅಡಿಗ ಮತ್ತು ಸುಮಾರು 18 ಸಾರ್ವತ್ರಿಕ ಚುನಾವಣೆ ಸಮೀಕ್ಷೆಗಳ ಅನುಭವಿ ಶೇಷಣ್ಣ - ಅರ್ಥಾತ್ ನಮ್ಮಿಬ್ಬರ ಅಭಿಪ್ರಾಯ ಸಹಿತ ಎಬಿಪಿ - ಸಿಎಸ್‌ಡಿಎಸ್ ಸಮೀಕ್ಷೆಗೆ ಸಮೀಪದ್ದಾಗಿದೆ. ಆದರೆ, ಖ್ಯಾತ ಸಮೀಕ್ಷಾ ಸಂಸ್ಥೆಗಳ ಮೂಲ ಉದ್ದೇಶದಲ್ಲಿ ಮಾತ್ರ ನಾವಿಬ್ಬರು ಎಬಿಪಿ-ಸಿಎಸ್‌ಡಿಎಸ್‌ಗಿಂತ ಭಿನ್ನರಾಗಿದ್ದೇವೆ. ನಮ್ಮದು ಫಲಿತಾಂಶ ಆಧಾರದ ಮೇಲೆ ನಡೆಯುತ್ತಿರುವ ಸಮೀಕ್ಷೆಯಲ್ಲ. ಸೋಲು - ಗೆಲುವಿಗಿಂತ ಜನಾಭಿಪ್ರಾಯ ನಮಗೆ ಮುಖ್ಯ. ಆದರೆ, ದೇಶದ ಬಹು-ಬಜೆಟ್ ತೂಕದ ಸಮೀಕ್ಷೆ ಸಂಸ್ಥೆಗಳ ಗುರಿ - ಉದ್ದೇಶ ಬೇರೆ.

ಉಳಿದ ಇನ್ನೆರಡು ದಿನಗಳಲ್ಲಿ ಮೋದಿ - ರಾಹುಲರ ಬಗೆಗಿನ ಸರ್ವೆ ಅಂದಾಜುಗಳು ಒಮ್ಮೆಲೇ ಬದಲಾವಣೆಗೊಂಡಲ್ಲಿ ಅಚ್ಚರಿಯೇನಿಲ್ಲ.

■ ಲೋಕಸಭೆ ಆಯ್ಕೆ ದೃಷ್ಟಿ

ಲೋಕಸಭೆ - ವಿಧಾನಸಭೆ ಚುನಾವಣೆಗಳಲ್ಲಿ ಮತದಾರರ ದೃಷ್ಟಿ ಅಜಗಜಾಂತರ ಎನ್ನುವುದಕ್ಕೆ ಗುಜರಾತು ಚುನಾವಣೆ ಸ್ಪಷ್ಟ ಉದಾಹರಣೆ. ಭಾಜಪ ನೇತೃತ್ವದ ಮುಖ್ಯಮಂತ್ರಿ ವಿಜಯರೂಪಾನಿ ಸರ್ಕಾರದ ಬಗೆಗೆ ಜನಾಭಿಪ್ರಾಯ ವಿರೋಧವಾಗಿದೆ. ಇದು ಸಾಮಾನ್ಯ ಮತದಾರರಿಂದ ನಾವು ಸಂಗ್ರಹಿಸಿದ ಪ್ರತಿಕ್ರಿಯೆ.

■ ಮತ್ತೊಂದು ಪ್ರತಿಕ್ರಿಯೆ ಗಮನಾರ್ಹವಾಗಿದೆ.

ಗುಜರಾತಿನ ಮತದಾರರದಲ್ಲಿ ಬಹು ಮಂದಿಗೆ ಲೋಕಸಭೆ ಚುನಾವಣೆ ಆಯ್ಕೆಗೆ ನರೇಂದ್ರಮೋದಿ ಮೀಸಲು ನಾಯಕನಿರುವಂತೆ ಕಾಯುತ್ತಿದೆ. ವಿಧಾನಸಭೆಗೆ ಮೋದಿ ಕೈಬಿಟ್ಟರೂ ಚಿಂತಿಲ್ಲ; ಲೋಕಸಭೆ ಚುನಾವಣೆಗೆ ಮೋದಿಯ ಹಿತರಕ್ಷೆಯೆ ಮುಖ್ಯ ಎಂದು ನಿರ್ಧರಿಸುವ ಮತದಾರರೂ ಇಲ್ಲಿದ್ದಾರೆ.

ಸೂರತ್‌ನಲ್ಲಿ ಮೋದಿ ಬಗೆಗೆ ಕೋಪ ಇನ್ನೂ ಶಮನವಾಗಿಲ್ಲ, ಹಲವು ವ್ಯಾಪಾರಿಗಳು ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ನೋಟು ಅಮಾನ್ಯೀಕರಣ ಮತ್ತು ಜಿಎಸ್‌ಟಿ ಕುರಿತು ಅಸಮಾಧಾನದಿಂದಲೇ ಮತಗಟ್ಟೆಗಳಿಗೆ ಹೋಗುವಂತೆ ಕಾಣುತ್ತಿದೆ. ಪ್ರತ್ಯಕ್ಷವಾಗಿ ನರೇಂದ್ರಮೋದಿ ಸರ್ಕಾರ ಆರ್ಥಿಕ ನೀತಿಯನ್ನು ಖಂಡಿಸುವ ಗುಜರಾತಿಗಳು ಪರ್ಯಾಯ ಕಾರಣಗಳಿಗಾಗಿ ಕಾಂಗ್ರೆಸ್ ಪಕ್ಷ ಮತ್ತು ರಾಹುಲಗಾಂಧಿಯವರ ನಾಯಕತ್ವಕ್ಕೆ ವಾಲಿದಂತಿದೆ. ಈ ಕಾರಣಗಳನ್ನು ಮುಂದಿಟ್ಟು ಸಮೀಕ್ಷೆ ತಂಡಗಳು ಮೋದಿಯವರ ಜನಪ್ರಿಯತೆ ಕಡಿಮೆಯಾಗಿರುವುದೆಂಬ ನಿರ್ಣಯಕ್ಕೆ ಬಂದಿರಲು ಸಾಕು.

■ ಜಾತಿ ವಲಯಗಳ ಅತೃಪ್ತಿ

ಕಳೆದ ಐದು ವರ್ಷಗಳಲ್ಲಿ ಗುಜರಾತಿನ ಭಾಜಪ ಸರ್ಕಾರದ ಸಾಧನೆಗಳು ಹೇಳಿಕೊಳ್ಳುವಷ್ಟು ಅಗಾಧ ಪ್ರಮಾಣದಲ್ಲಿಲ್ಲ, ಹಿಂದಿನ ಮುಖ್ಯಮಂತ್ರಿ ಆನಂದಿಬೆನ್ ಪಾಟೀಲ್‌ರ ಎರಡು ವರ್ಷಗಳ ಸಾಧನೆ ಶೂನ್ಯ ಎಂದು ಮತದಾರರು ದೂರಿದುದನ್ನು ನಾವು ಕೇಳಿಸಿ ಕೊಂಡೆವು.

ಈಗಿರುವ ಮುಖ್ಯಮಂತ್ರಿ ವಿಜಯರೂಪಾನಿಯವರನ್ನು ಭಾಜಪ ರಾಷ್ಟ್ರೀಯ ಅಧ್ಯಕ್ಷ ಅಮಿತ್ ಷಾರವರು ಸಿದ್ಧಗೊಳಿಸಿದ 'ರಬ್ಬರ್ ಸ್ಟಾಂಪ್' ಎಂದು ಪರಿಹಾಸ್ಯ ಮಾಡಲಾಗುತ್ತಿದೆ. ಷಾರವರ ಹುಕುಮ್ಮಿನಂತೆ ರೂಪಾನಿ ಸರ್ಕಾರ ನಡೆದಿದೆ ಎಂದು ಗುಜರಾತಿ ಮಾಧ್ಯಮಗಳು ಸತತವಾಗಿ ಟೀಕಿಸುತ್ತ ಬಂದಿವೆ.

ರಾಜ್ಯದ ಭಾಜಪ ಸರ್ಕಾರದ ನಿಷ್ಕ್ರಿಯತೆಯಿಂದ ಹಿಂದುಳಿದ ಜಾತಿಗಳು ಮತ್ತು ಪರಿಶಿಷ್ಟಜಾತಿ, ಪಂಗಡಗಳು ಆಡಳಿತ ಪಕ್ಷದಿಂದ ದೂರವಾಗಿದೆ. ಪಾಟೀದಾರ ಆಂದೋಲನದಿಂದಾಗಿ ಹಾರ್ದಿಕ ಪಟೇಲರ ಮಾತಿಗೆ ಮೋದಿಯವರ ಮಾತಿಗಿಂತ ಹೆಚ್ಚು ಮನ್ನಣೆ ಸಿಗುತ್ತಿದೆ.

ಒಟ್ಟಿನಲ್ಲಿ ಪ್ರಧಾನಿ ನರೇಂದ್ರಮೋದಿಯವರ ಪರಿಸ್ಥಿತಿ ಕೊಂಚಮಟ್ಟಿಗೆ ಕೆಟ್ಟಿದೆ

ಶೇಷಣ್ಣ + ಅರುಣ ಅಡಿಗ

ಬರೋಡಾದಿಂದ ವರದಿ, ಡಿ. 6, 2017.

ನಟನೆಯಲ್ಲಿ ಅಮಿತಾಬ್‌ಗಿಂತ ಮೋದಿ ಹೆಚ್ಚು; ರಾಹುಲ ಪರಿಹಾಸ್ಯ

ಗುಜರಾತು ಚುನಾವಣೆ ಫಲಿತಾಂಶ ಏನಾದರೂ ಆಗಲಿ, ಬಿಡಲಿ, ಕಾಂಗ್ರೆಸ್ ಉಪಾಧ್ಯಕ್ಷ (ಇನ್ನೇನು ಅಧ್ಯಕ್ಷ) ರಾಹುಲಗಾಂಧಿ ಸಾರ್ವಜನಿಕ ವೇದಿಕೆ ಭಾಷಣ ಪರೀಕ್ಷೆಯಲ್ಲಿ ಪಾಸಾಗಿದ್ದಾರೆ. ಇವರ ಪಾಸು- ಫೇಲಿನ ಸರ್ಟಿಫಿಕೇಟ್ ಡಿಸೆಂಬರ್ 18ರಂದು ಮತಗಣನೆ ಮುಗಿದ ಬಳಿಕ ತಿಳಿಯಲಿದೆ.

ಇತ್ತೀಚೆಗೆ ಗುಜರಾತಿಗೆ ನೀಡಿದ ಆರನೆಯ ಪ್ರಚಾರ ಭಾಷಣ ಪ್ರವಾಸದಲ್ಲಿ ರಾಹುಲಗಾಂಧಿ ಮಿಂಚಿದ್ದು, ಮಿಂಚಿದ್ದೆ. ಇದರ ಹಿನ್ನೆಲೆ ಏನೆಂದರೆ, ಗುಜರಾತಿನ ಜನನಾಯಕ ಮತ್ತು ದೇಶದ ಪ್ರಧಾನಮಂತ್ರಿ ನರೇಂದ್ರಭಯ್ಯಾರವರನ್ನು ಕುರಿತು ರಾಹುಲರ ವಿಡಂಬನೆ.

ಜುನ್ನಾಗಢ, ಸೋಮನಾಥ ಪ್ರಾಂತ್ಯಗಳ ಪಿಸಾವದಾರ, ಸವರಕುಂಡ್ಲ ಮತ್ತು ಅಮ್ರೇಲಿಗಳಲ್ಲಿ ರಾಹುಲಗಾಂಧಿಯವರು ಸಭಿಕರನ್ನು ನಗೆ ಹೊನಲಿನಲ್ಲಿ ತೇಲಿಸಲು ಅನುಸರಿಸಿದ ಪರಿಹಾಸ್ಯ ಶೈಲಿ ಅದ್ಭುತವಾಗಿತ್ತು.

ರಾಹುಲರು ಸತತವಾಗಿ ಮಾಡುವ ಮತ್ತೊಂದು ವಿನೋದವೆಂದರೆ ಪ್ರಧಾನಿಯವರ 'ಮನ್‌ಕೀ ಬಾತ್'. 'ತರಹೇವಾರಿ ಸುಳ್ಳು ಕಂತೆಯಂತಿದೆ. ಈ ಸ್ವಗತ ಸಂಭಾಷಣೆ ಎಂದುಮೋದಿಯನ್ನು ಹಂಗಿಸುತ್ತ ನಡೆದಿದ್ದಾರೆ.

■ ಅರುಣ ಅಡಿಗ

ಸೌರಾಷ್ಟ್ರದ ಟಿಪ್ಪಣಿಗಳು, ಡಿ.6, 2017.

> 'ನಮ್ಮ ಪ್ರಧಾನಿ ಮೋದಿಯವರುಮುತ್ಸದ್ದಿ ನಾಯಕಎನ್ನುವುದಕ್ಕಿಂತ ಪರಿಪೂರ್ಣ ಕಲಾಪಾರಂಗತ ನಟನಾಕಾರರು. ಅವರಿಗೆ ಬೇಕೆನಿಸಿದ ಕ್ಷಣದಲ್ಲಿ ಕಣ್ಣೀರು ಕರೆಯುವ ಕಲೆ ಲಭಿಸಿದೆ. ನಾನುಹಾಸ್ಯಕ್ಕೆ ಈ ಮಾತು ಹೇಳುತ್ತಿದ್ದೇನೆ ಎಂದು ಭಾವಿಸಬೇಡಿ. ಉದಾಹರಣೆಗೆ ಖ್ಯಾತ ನಟ ಅಮಿತಾಬ್ ಬಚ್ಚನ್‌ರೊಂದಿಗೆ ಮೋದಿಯವರನ್ನು ಹೋಲಿಸಿ. ಬಚ್ಚನ್‌ರಿಗೆ ಈಗಲೂ ಕಣ್ಣೀರು ದೃಶ್ಯಗಳ ಚಿತ್ರೀಕರಣಕ್ಕೆ ಕಾಂಟ್ಯಾಕ್ಟ್ ಲೆನ್ಸ್ ಮತ್ತಿತರ ಪರಿಕರಗಳ ಸಹಾಯ ಬೇಕು. ಮೋದೀಜಿಯವರಿಗೆ ಇದಾವುದರ ಅವಶ್ಯಕತೆಯೂ ಬೇಡ.
>
> ಥಟ್ಟನೆ ಕಣ್ಣೀರು ಸುರಿಯುವ ಪ್ರಚಂಡ ನಟನೆ ಅವರಿಗೆ ಕರಗತವಾಗಿದೆ. ಚುನಾವಣೆ ಕಾಲದಲ್ಲಂತೂ ನಟನೆಯಿಂದ ಮತದಾರ ಸಮೂಹವನ್ನು ಮರುಳು ಮಾಡುವ ಅದ್ಭುತ ನಾಯಕ ಮೋದಿ ಯೊಬ್ಬರೇ.....' - ಇದು ರಾಹುಲ ವ್ಯಾಖ್ಯಾನ.



6 ನೇ ಪುಟದಿಂದ

549	64187685494	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	89467	ರಂಗಪ್ಪ
550	36937507714	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	133775	ವಾಸುದೇವರೆಡ್ಡಿ
551	64198044138	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	175561	ಅನುಸೂಯಮ್ಮ
552	64198128268	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	130023	ಅನುಸೂಯಮ್ಮ
553	64188135471	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	35560	ಎಲಿಯಪ್ಪ
554	36897612926	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	50703	ಹನುಮಂತರಾಯ
555	64206730131	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	122600	ಹನುಮಂತರಾಯ
556	36948339278	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	30129	ಮಲ್ಲೇಶ್ವರಪ್ಪ
557	36969926750	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	88089	ರವೀಂದ್ರನಾಥ
558	64198470745	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	44797	ರವೀಂದ್ರನಾಥ
559	36969694751	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	100101	ರಾಮಪ್ಪ
560	64215664973	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	97779	ರಾಮಪ್ಪ
561	64215817784	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	31660	ನರಸಿಂಹಯ್ಯ
562	64134434940	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	32484	ನರಸಿಂಹರೆಡ್ಡಿ ಕೆ.ಹೆಚ್
563	64201495272	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	267157	ನರಸಿಂಹರೆಡ್ಡಿ ಕೆ.ಹೆಚ್
564	64179812945	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	267157	ನಾಗಮ್ಮ
565	36969514849	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	65066	ಮಲ್ಲಯ್ಯ ಆರ್
566	37027333902	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	42730	ಮಲ್ಲಯ್ಯ ಆರ್
567	37161280795	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	72921	ಹನುಮಂತರೆಡ್ಡಿ
568	64214437522	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	90733	ಆನಂದಪ್ಪ
569	37071963997	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	101072	ಹರಿಪ್ರಸಾದ್
570	64196049354	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	148322	ಈರಕ್ಯಾತಪ್ಪ
571	64151680600	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	61757	ಲಕ್ಷ್ಮೀನರಸಮ್ಮ
572	36985620904	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	191363	ರಾಮರೆಡ್ಡಿ
573	64202854822	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	103493	ರಾಮಕೃಷ್ಣಚಾರಿ
574	37027342044	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	107945	ಮೂರ್ಕಣಪ್ಪ
575	64194940127	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	119931	ನಾಗಪ್ಪ
576	64196829561	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	60252	ಈರನಾಗಪ್ಪ
577	64158987283	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	69530	ಮಾನಮ್ಮ
578	36918587896	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	101340	ಉದ್ದಪ್ಪ
579	64188586990	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	42167	ಶ್ರೀರಂಗನಾಯಕ್
580	36925253864	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	40170	ಸುಬುದ್ರಮಣಿ
581	36918702162	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	100332	ತಿಮ್ಮಕ್ಕ
582	64203028511	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	55414	ತಿಮ್ಮಕ್ಕ
583	64133768259	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	52529	ಈರಣ್ಣ
584	64204616091	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	165500	ಮಡಿವಾಳಪ್ಪ
585	64186552667	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	66500	ಚಂದ್ರಣ್ಣ
586	64191962371	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	43500	ದೊಡ್ಡಬಾಲಪ್ಪ
587	64192028098	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	57500	ದೊಡ್ಡಬಾಲಪ್ಪ
588	64192772935	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	75500	ದೊಡ್ಡಬಾಲಪ್ಪ
589	36897614435	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	18046	ಲಕ್ಷ್ಮಣಪ್ಪ
590	64196272928	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	65453	ನಾಗಮ್ಮ
591	64178441152	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	51560	ಶ್ರೀನಿವಾಸಲು
592	64207542546	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	34706	ಶ್ರೀನಿವಾಸಲು
593	36913706036	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	70611	ಆನಂದಪ್ಪ
594	64196200816	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	35951	ಆನಂದಪ್ಪ
595	64207261521	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	90500	ರಾಮಾಂಜನಪ್ಪ
596	64195899915	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	48708	ರಾಮಣರೆಡ್ಡಿ
597	64211637910	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	32880	ರಾಮಣರೆಡ್ಡಿ
598	64196198851	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	70000	ದೇವರಾಜು
599	64138236467	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	119440	ಹನುಮಂತರಾಯಪ್ಪ
600	64212574729	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	25148	ಕೃಷ್ಣಪ್ಪ
601	64176451774	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	18530	ಹನುಮಂತರಾಯಪ್ಪ
602	64198309469	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	81704	ಜಯಾಬುನ್ನಿಸಾ
603	37097098125	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	38769	ಬೊಮ್ಮಲಿಂಗಪ್ಪ
604	64162352510	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	70746	ಲಕ್ಷ್ಮೀನರಸಮ್ಮ
605	64152833090	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	24809	ನಾಗಮ್ಮ
606	64154550087	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	38483	ತಿಮ್ಮಾರೆಡ್ಡಿ
607	64206715760	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	28368	ಈರಚಿನ್ನಕ್ಕ
608	64211796200	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	37157	ಲಕ್ಷ್ಮೀದೇವಿ
609	64169942841	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	39321	ನಾಗಪ್ಪ
610	64178147693	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	57620	ಸಂಜೀವಪ್ಪ
611	64212645807	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	34769	ಅಲವೇಲಮ್ಮ
612	37249547140	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	100870	ಏಕಾಂತ
613	64196199796	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	33494	ಸಿದ್ದಪ್ಪ
614	36971859165	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	22017	ವೆಂಕಟರಮಣಪ್ಪ
615	64197051271	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	18187	ವೆಂಕಟರಮಣಪ್ಪ
616	64215949313	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	77500	ಮುಕ್ಕಣ್ಣಪ್ಪ
617	64196816518	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	73400	ಕಮಲಮ್ಮ
618	64211873118	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	43609	ಧರ್ಮಪಾಲ
619	37277680780	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	50590	ಮಲ್ಲಿಕಾರ್ಜುನಯ್ಯ
620	64143877517	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	68233	ರಾಮಪ್ಪ
621	64207540333	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	39109	ಅವನಿಬೊಮ್ಮಯ್ಯ
622	64215609456	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	63970	ಮಲ್ಲಮ್ಮ
623	64173555787	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	43560	ಪಾಂಡುರಂಗ
624	64200120722	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	39691	ಹನುಮಂತರಾಯಪ್ಪ
625	64172675277	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	57500	ಜಯರಾಮಯ್ಯ
626	64197052253	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	18500	ಜಯರಾಮಯ್ಯ
627	64212650690	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	51887	ಭೀಮಪ್ಪ
628	64143596922	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	20703	ಬೋರಪ್ಪ
629	64177358832	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	42560	ರಾಮಾಂಜಿನಮ್ಮ
630	36918585083	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	13099	ಮಾರಣ್ಣ
631	64141597189	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	61120	ಮುನೀರ್ ಎಸ್
632	64164111550	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	25178	ಸಿದ್ದರಾಮೇಶ್ವರ
633	64186842960	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	28500	ಸಿದ್ದರಾಮೇಶ್ವರ
634	64175310245	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	18587	ಧನಂಜಯ
635	64177359336	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	15530	ಧನಂಜಯ
636	64186136158	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	17051	ಧನಂಜಯ
637	37126755060	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	13003	ನಾಗೇಶ್
638	64211794258	ಕೊಟಗುಡ್ಡ ಶಾಖೆ, ಮಧುಗಿರಿ ತಾ॥	17775	ನಾರಾಯಣ್ಣ
639	64142095881	ಶ್ರಾವಂಡನಹಳ್ಳಿ ಶಾಖೆ, ಮಧುಗಿರಿ ತಾ॥	38856	ಮಹದೇವಯ್ಯ
640	64154291587	ಹೊಸಕೆರೆ ಶಾಖೆ, ಮಧುಗಿರಿ ತಾ॥	255785	ಜಗದೀಶಾಚಾರ್
641	64154291350	ಹೊಸಕೆರೆ ಶಾಖೆ, ಮಧುಗಿರಿ ತಾ॥	192754	ಮಾಲತೇಶಾಚಾರ್

ದಿನಾಂಕ : 04-12-2017

ಪ್ರಾದೇಶಿಕ ವ್ಯವಸ್ಥಾಪಕರು

ಪ್ರಾದೇಶಿಕ ವ್ಯವಹಾರಗಳ ಕಛೇರಿ- 4, ಆಡಳಿತ ಕಛೇರಿ-3, ತುಮಕೂರು